

# ಕಿಚನ್‌ನಲ್ಲಿ ಕ್ರಾಂತಿ

## ಉಪ್ಪು-ಹುಳಿ-ಖಾರ ಬದಲಾಗಿದೆ ಕೈ-ರುಚಿ

ಹುಬ್ಬಳ್ಳಿಯ ರೂಪಾ ಅವರದ್ದು ಹನ್ನೊಂದು ಸದಸ್ಯರಿರುವ ತುಂಬು ಕುಟುಂಬ. ಮೂರು ಹೊತ್ತೂ ಅಷ್ಟೂ ಜನರ ಹೊಟ್ಟೆ ತುಂಬಿಸಲು ಅಡುಗೆಮನೆಯಲ್ಲಿ ಕೆಲಸ ಮಾಡಬೇಕಾದುದು ರೂಪಾ ಅವರೊಬ್ಬರೇ. ಇಡೀ ದಿನ ಅಡುಗೆ ಕೆಲಸವೇ ಅವರ 'ಲೋಕ' ಎನ್ನುವಂತೆ ಇದ್ದವರು. ಈ 'ಅಡುಗೆಲೋಕ'ದಿಂದ ನಿತ್ಯ ಅವರು ಒಂದಿಷ್ಟು ಸಮಯ ಬಿಡುವು ಪಡೆಯಲು 'ಲಾಕ್‌ಡೌನ್' ಸಮಯ ಕಾರಣವಾಯಿತು.

ಇಡೀ ದಿನ ಅಡುಗೆಮನೆಯಲ್ಲಿ ಕಳೆಯುತ್ತಿದ್ದ ರೂಪಾ ಅವರ ಕಷ್ಟ, ಅವರ ಪತಿಗೆ ಮತ್ತು ಕುಟುಂಬದವರ ಅರಿವಿಗೆ ಬಂದದ್ದು ಲಾಕ್‌ಡೌನ್ ಅವಧಿಯಲ್ಲಿ. 'ಅಡುಗೆ' ಎನ್ನುವುದು ಗಂಡ ಹೆಂಡತಿಯ ನಡುವಿನ ಹೊಂದಾಣಿಕೆಯ ಭಾಗ ಎನ್ನುವುದು ಪತಿಗೆ ಅರಿವಾಗಿದ್ದು ಆಗಲೇ. ಮೈದುನನೂ ಗ್ಯಾಸ್ ಹಚ್ಚಿ, ಸೌಟ್ ಹಿಡಿದು ಅಡುಗೆ ಮಾಡಲು ಮುಂದಡಿಯಿಟ್ಟರು. ಮನೆಯವರೆಲ್ಲ ರೂಪಾ ಅವರ ಕೆಲಸ ಹಂಚಿಕೊಂಡರು. ಬೆಳಿಗ್ಗೆ ಅಥವಾ ರಾತ್ರಿ ಅಡುಗೆ ಕೆಲಸ ಪತಿಯದ್ದು ಅಥವಾ ಮೈದುನನದ್ದು. ಮಕ್ಕಳು ಪಾತ್ರೆ ತೊಳೆಯಲು, ಕಸ ಗುಡಿಸಲು ಸಹಾಯ ಮಾಡಿದರು. ಲಾಕ್‌ಡೌನ್ ತೆರವಾದ ನಂತರವೂ ಈ 'ಹಂಚಿಕೊಳ್ಳುವಿಕೆ' ಮುಂದುವರಿದಿದೆ.

***

ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿದ್ದ ಶಿವಮೊಗ್ಗದ ಅಜಯ್‌ಗೆ ದಿಢೀರನೇ ಎದುರಾದ ಲಾಕ್‌ಡೌನ್ ಊಟಕ್ಕೆ ಸಂಚಕಾರ ತಂದಿತ್ತು. ಅಜಯ್ ಊಟಕ್ಕೆ ಅವಲಂಬಿಸಿದ್ದು ಖಾನಾವಳಿ, ಹೋಟೆಲ್‌ಗಳನ್ನು. ಲಾಕ್‌ಡೌನ್ ಊರನ್ನೂ ದೂರ ಮಾಡಿತ್ತು. ಅದುವರೆಗೂ ಅಡುಗೆಮನೆಯ ಸ್ವಾದ ಸ್ವಾರಸ್ಯವೇ ಗೊತ್ತಿರದ ಅಜಯ್ ಮೊದಲಬಾರಿಗೆ ಸೌಟು ಹಿಡಿದರು. ಒಂದಷ್ಟು ರೇಷನ್ ತಂದರು. 'ರೂಂನಲ್ಲಿಯೇ ಅಡುಗೆ ಮಾಡಿಕೊಳ್ಳುವೆ' ಎಂದಾಗ ಸ್ನೇಹಿತರು ಕಣ್ಣರಳಿಸಿ, ಪಾತ್ರೆ, ಸ್ಟೌಗಳನ್ನು ಎರವಲಾಗಿ ನೀಡಿದರು. ಬೆಂಗಳೂರಿನಲ್ಲೇ ಇದ್ದ ಸಂಬಂಧಿಕರ ಬಳಿ ಸುಲಭವಾಗಿ ಅಡುಗೆ ಮಾಡುವ ಒಂದಷ್ಟು ರೆಸಿಪಿಗಳನ್ನು ಕೇಳಿ ತಿಳಿದುಕೊಂಡರು. ತಾವೇ ಮಾಡಿದ್ದ ಕೈರುಚಿ ಹೋಟೆಲ್‌ಗಿಂತ ಹೊಸ ರುಚಿಯನ್ನು ನೀಡಿತು. ಆರೋಗ್ಯಪೂರ್ಣ ಎಂದೆನಿಸಿತು. ಈಗ ಹೋಟೆಲ್‌ಗಳು ತೆರೆದಿದ್ದರೂ ಅಜಯ್ ಅತ್ತ ಮುಖ ಮಾಡುತ್ತಿಲ್ಲ. ಅಲ್ಲದೇ ವಿಶ್ವದ ಯಾವ ಮೂಲೆಗೆ ಹೋದರೂ ಸ್ವಾವಲಂಬಿಯಾಗಿ ಬದುಕಬಹುದೆಂಬ ಆತ್ಮವಿಶ್ವಾಸ ಅವರಲ್ಲಿ ಮೂಡಿದೆ. ಅಡುಗೆ ಕಲಿಕೆ ಅವರಲ್ಲಿ ಆತ್ಮಸ್ಥೈರ್ಯ ತುಂಬಿದೆ.

***

ಆ ದಿನ ಅಮ್ಮನ ಹುಟ್ಟುಹಬ್ಬ. ಪಿಯುಸಿ ಓದುವ ಪ್ರೀತಿ ಅವರಿಗೆ ಅಮ್ಮನಿಗೆ ಏನಾದರೂ ಸರ್‌ಪ್ರೈಸ್ ಕೊಡಬೇಕೆಂಬ ತುಡಿತ. ಬೇಕರಿಗಳೂ ಬಂದ್ ಆಗಿವೆ. ಪ್ರೀತಿ ಮನೆಯಲ್ಲೇ ಕೇಕ್ ಮಾಡಲು ನಿರ್ಧರಿಸಿದಳು. ಆನ್‌ಲೈನ್ ಕ್ಲಾಸ್ ಮುಗಿದ ಕೂಡಲೇ ಆಕೆಯ ಬೆರಳು ಹೊರಳಿದ್ದು ಯೂಟ್ಯೂಬ್‌ನತ್ತ. ತನ್ನ ಹುಟ್ಟುಹಬ್ಬಕ್ಕೆ ಅಮ್ಮ ಓರಿಯೊ ಕೇಕ್ ಮಾಡಿದ್ದನ್ನು ನೆನಪಿಸಿಕೊಂಡ ಪ್ರೀತಿ, ಯೂಟ್ಯೂಬ್‌ನಲ್ಲಿ ಕೇಕ್ ಮಾಡುವ ವಿಧಾನ ನೋಡಿದಳು. ಹಿಂದೆ ಅಮ್ಮ ಕೇಕ್ ಮಾಡುವುದನ್ನು ನೋಡಿದ್ದ ಆಕೆ ಪ್ರಯೋಗಕ್ಕೆ ಇಳಿದಳು. ಮೂವತ್ತೇ ನಿಮಿಷದಲ್ಲಿ ರುಚಿಕರ ಕೇಕ್ ಸಿದ್ಧ. ಬಟ್ಟೆ ತೊಳೆದು